ಎಂದು ನರ್ಸ್ ಶಾಂಟೆಲ್ ಕಣ್ಣು ಹೊಡೆದಳು.

ಅಲ್ಲಿದ್ದ ಎಷ್ಟು ಜನರ ಚಡ್ಡಿಗಳು ಒದ್ದೆಯಾಗಿದ್ದವೋ ಗೊತ್ತಿಲ್ಲ, ಆದರೆ ಮಿ.ಕೆ. ಮಾತ್ರ ಈ ಪ್ರಪಂಚದಲ್ಲಿ ಇದ್ದಂತಿರಲಿಲ್ಲ. ಅವನ ಮೈಯಲ್ಲಿ ಸಣ್ಣ ನಡುಕ ಇದ್ದಂತೆ ಭಾಸವಾಯಿತು. ಮೊದಲೇ ಬೆಳ್ಳಗಿದ್ದ ಮುಖದಲ್ಲಿ ರಕ್ತ ಒತ್ತರಿಸಿ ಬಂದು ಕೆನ್ನೆಗಳು ಕೆಂಪಗಾಗಿದ್ದವು.

"ನೀವೇನೂ ವರ್ಜಿನ್ಸ್ ಅಲ್ಲ ಬಿಡಿ..." ಎಂದು ಬಿಡೋಣ ಅಂತ ತೆರೆದ ಬಾಯನ್ನು ಬಲವಂತವಾಗಿ ಮುಚ್ಚಿದೆ. ಅಷ್ಟಕ್ಕೂ ಪ್ರೀತಿಯೆನ್ನುವ ಹೆಸರಿನ ನನಗೆ ಪ್ರೀತಿಯ ಅರಿವಿಲ್ಲದೇ ಇಪ್ಪತ್ತು ವರ್ಷಗಳಾಗಿ ಬಿಟ್ಟಿದ್ದವು. ನನಗೆ ಆ ಬಗ್ಗೆ ಮಾತಾಡುವ ನೈತಿಕ ಹಕ್ಕಿರಲಿಲ್ಲ. "ಆಲ್ ದಿ ಬೆಸ್ಟ್" ಎಂದು ಹರಸಿದೆ.

ಮಿ.ಕೆ.ಗೆ ಹೊಸದಾದ ಈ ಸಂಬಂಧ ಅಚಾನಕ್ ಆಗಿ ಕುದುರಿತ್ತು. ಯಾವುದೇ ತಕರಾರುಗಳಿಲ್ಲದೆ ಕೊನೆಯಾಗಿದ್ದ ಇವನ ಹಳೆಯ ಸಂಗಾತಿಯೊಬ್ಬನ ಸಂಪರ್ಕವನ್ನು ಇವನಿನ್ನೂ ಇಟ್ಟುಕೊಂಡಿದ್ದ. ಅವನ ಸಾಮಾಜಿಕ ತಾಣದ ಮೂಲಕ ಈ ಸುಂದರ ಸಂಪರ್ಕಕ್ಕೆ ಬಂದಿದ್ದ. ಒಂದೆರಡು ವಾರ ಬರೀ ಸಂದೇಶಗಳು ಮತ್ತು ಫೋಟೊಗಳ ವಿನಿಮಯವಾಗಿತ್ತು. ಇವತ್ತು ಬೇಗ ಕೆಲಸ ಮುಗಿಸಿ ಟ್ರೈನ್ ಹತ್ತಿ ಲಂಡನ್ನಿನ ಗೇ ಕ್ಲಬ್ ಒಂದರಲ್ಲಿ ಭೇಟಿಯಾಗುವವರಿದ್ದರು.

"ಈಸ್ ಹಿ ನಾಟ್, ಟೂ ಗುಡ್ ಟು ಬಿ ಟ್ರೂ?" (ಇಷ್ಟು ಚೆಂದವಾಗಿರುವ ಇವನು ನಿಜವಾಗಿರಲು ಸಾಧ್ಯವಾ?) ಎಂದು ಗೆಳತಿಗೆ ಎಚ್ಚರಿಸುವಂತೆ ಎಚ್ಚರಿಸುವ ಮನಸ್ಸಾಯಿತು. ಆದರೆ, ನಾನಿರುವ ಪ್ರಪಂಚದಲ್ಲಿ ವಯಸ್ಸಿಗೆ ಬಂದ ಮಕ್ಕಳಿಗೂ ಹಾಗೆ ಹೇಳಲು ಸಾಧ್ಯವಿಲ್ಲ. ಹಾಗಿರುವಾಗ ಚಿಗುರು ಪ್ರೀತಿಯ ಮುದ ಮತ್ತು ಮದದಲ್ಲಿರುವ ವಯಸ್ಕ ಸಹೋದ್ಯೋಗಿಗೆ ಹೇಳಲು ಸಾಧ್ಯವಾ?

ಬದಲು, "ಏನು ತಯಾರಿ?" ಎಂದು ವಿಚಾರಿಸಿದೆ.

ನಿನ್ನೆಯೇ ಹೇರ್ ಕಟಿಂಗ್‌ಗೆ ಹೋಗಿ ಬಂದಿದ್ದ. ಫೋಟೊಗಳಿಗಾಗಿ ಮತ್ತು ಭೇಟಿಗಾಗಿ ಬೋಟಾಕ್ಸ್ ಹಾಕಿಸಿಕೊಂಡಿದ್ದ. ಹಲ್ಲನ್ನು ದಂತ ವೈದ್ಯರ ಬಳಿ ಹೋಗಿ ಸ್ವಚ್ಛಗೊಳಿಸಿಕೊಂಡು ಬಂದಿದ್ದ. ಹಲ್ಲುಗಳನ್ನು ಬಿಳಿ ಮಾಡುವ ಬ್ಲೀಚ್ ಅನ್ನು ಬಳಸಿದ ಕಾರಣ ಅವನ ಹಲ್ಲುಗಳು ಹೊಳೆಯುತ್ತಿದ್ದವು. ದುಬಾರಿ ಬರ್ಬರಿ ಬ್ರಾಂಡ್‌ನ ಬಿಗಿಯಾಗಿ ಮೈಗೆ ಅಂಟುವಂತಹ ಟಿ– ಶರ್ಟ್ ಕೊಂಡಿದ್ದ. ಜೊತೆಗೆ ಘಮ ಘಮಿಸುವ ಪರ್ಫ್ಯೂಮ್ ಮತ್ತು ಎರಡಿಂಚೆತ್ತರದ ಶೂಗಳನ್ನು ಧರಿಸಿದ್ದ.

ಅವನ ತಯಾರಿ ನೋಡಿ ನನಗೆ ಸುಸ್ತಾಯಿತು. ಹೀಗೆ ಸಂಭ್ರಮವಾಗಿ ನಾನು ಅಲಂಕರಿಸಿಕೊಂಡು ಎಷ್ಟು ವರ್ಷಗಳಾದವು ಎಂಬುದು ಮರೆತು ಹೋಗಿತ್ತು. ಅರೆಕ್ಷಣ ಅವನ ಬಗ್ಗೆ ಅಸೂಯೆಯೆನಿಸಿತು.

ಎಲ್ಲರೂ ಅವನನ್ನು ರೇಗಿಸಿ, ಕೆನ್ನೆ ಕೆಂಪೇರಿಸಿದೆವು. ಚೆನ್ನಾಗಿ ತಿಂದು ಹೋಗು, ಇಲ್ಲವಾದರೆ ಇನಿಯ ಬಂದು ಮುಂದೆ ನಿಂತಾಗ ಎಚ್ಚರ ತಪ್ಪಿ ಬೀಳುತ್ತೀಯೆಂದು ಛೇಡಿಸಿದೆವು. ಮಿ.ಕೆ. ಯಾವತ್ತೂ ಇಷ್ಟೊಂದು ಉದ್ವೇಗಗೊಂಡಿದ್ದನ್ನು ನೋಡಿರಲಿಲ್ಲ. ಸೆಕ್ಸ್‌ಗೋ, ಸಾಂಗತ್ಯಕ್ಕೋ ಸಂಬಂಧ ಬೆಳೆಸಿಕೊಳ್ಳಲಿ, ಆದರೆ ಇವನ ದುಪ್ಪಟ್ಟು ಸ್ಫುರದ್ರೂಪಿಯಾದ ಆ ಚಿತ್ರದಲ್ಲಿದ್ದ ಗಂಡಸಿಗೆ ಗೇಗಳ ಲೋಕದಲ್ಲಿ ಅತ್ಯಪಾರ ಬೇಡಿಕೆಯಿರುತ್ತದಲ್ಲವೇ? ಅವನು ಮಿ.ಕೆ.ಯ ಜೊತೆ ನಿಂತಾನೆಯೇ?– ಯಾಕೋ ಕೆಡುಕೆನಿಸಿತು. ಮಿ.ಕೆ.ಯ ಬಗ್ಗೆ ಮರುಕವೆನ್ನಿಸಿತು.

★★★

ಆಗೊಮ್ಮೆ ಈಗೊಮ್ಮೆ ಇನ್ಯಾರೂ ಇಲ್ಲದಿದ್ದಾಗ ನಾವು ಆಳವಾದ ವಿಚಾರಗಳನ್ನು ಮಾತಾಡಿದ್ದೆವು. ಮಿ.ಕೆ.ಗೆ ತನ್ನ ಗೇಗಳ ಪ್ರಪಂಚದ ಕ್ಷಣಿಕತೆಯ ಬಗ್ಗೆ ಹಲವು ಆತಂಕಗಳಿದ್ದವು. ಅವನೂ ನನ್ನಂತೆಯೇ ಅಸಹಾಯಕನಾಗಿದ್ದ,

ಅಪ್ಪಟ ಕ್ಯಾಥೊಲಿಕ್ ಆಗಿದ್ದ ಅವನ ತಂದೆ ಇವನನ್ನು ಒಪ್ಪದೇ ಸತ್ತಿದ್ದ. ತಾಯಿ ಸತ್ತ ನಂತರ ಪೋಲಂಡಿನ ಅವನ ಇತರೆ ಸಂಬಂಧಿಗಳ ಮನೆಗೆ ಅವನು ಹೋಗವುದು ಅಷ್ಟಕ್ಕಷ್ಟೆ ಇತ್ತು. ಮಕ್ಕಳ